**ದಿನಾಂಕಃ 28-01-2021 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು. -**

ಪಾಟೀ ಸವಾಲುಃ ಶ್ರೀ ಕೆ ಬಿ ಆರ್ 21 ನೇ ಪ್ರತಿವಾದಿ ಪರಃ ನಾನು ಆರ್ ಮಹೇಶಪ್ಪ ಎಂದು ತೋರಿಸಲು ದಾಖಲೆ ಮತ್ತು ವಾಸಸ್ಥಳ ದೃಡಿಕರಣ ದಾಖಲೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ನಿಪಿ 43 ವಂಶವೃಕ್ಷ ದಾಖಲೆ ಅಪೂರ್ಣ ದಾಖಲೆ ಅಂದರೆ ಸರಿಯಲ್ಲ. ಆರ್ ಸಿದ್ದಲಿಂಗಪ್ಪನವರ ಹೆಸರಿನಲ್ಲಿ ಇನ್ನೂ ಕೆಲವು ಆ್ತಸಿಗಳು ಇದ್ದು ಅವುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿಯಲ್ಲ. ಆರ್ ಸಿದ್ದಲಿಂಗಪ್ಪ ಜೋಳದಕೂಡ್ಲಿಗಿಯಲ್ಲಿ ವಾಸಿಸುತ್ತಾ ಅಲ್ಲಿಯೇ ತೀರಿಕೊಂಡಿರುತ್ತಾರೆ ಅಂದರೆ ಸರಿ. ಅವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅಂದರೆ ಸರಿ. ಅವರ ಮೊದಲ ಮಗ ಚೆನ್ನಬಸಪ್ಪ, 2 ನೇ ಮಗ ಶಂಕ್ರಪ್ಪ 3 ನೇ ಮಗ ಚಂದ್ರಪ್ಪ ಅಂದರೆ ಸರಿ. ಹೆಣ್ಣುಮಕ್ಕಳಲ್ಲಿ ಚೆನ್ನಬಸಮ್ಮ ಮೊದಲನೇಯವರು, ಗುರುಸಿದ್ದಮ್ಮ 2 ನೇಯವರು ಮತ್ತು ಶಿವಕ್ಕ 3 ನೇಯವಳು ಅಂದರೆ ಸರಿ. ಸಿದ್ದಲಿಂಗಪ್ಪನ ಮಗ ಚೆನ್ನಬಸಪ್ಪನವರಿಗೆ 21 ನೇ ಪ್ರತಿವಾದಿ ಮತ್ತು ವಾದಿಯು ಮಕ್ಕಳು ಅಂದರೆ ಸರಿಯಲ್ಲ, ವಾದಿಯು ಮಾತ್ರ ಮಗ .

ನನ್ನ ಮುತ್ತಜ್ಜ ಸಿದ್ದಲಿಂಗಪ್ಪ ಹರಪ್ಪನಹಳ್ಳಿ ತಾಲೂಕಿನ ನೀಲವುಂಜಿಗೆ ಗ್ರಾಮಕ್ಕೆ ಹೋಗಿ ಖಾಯಂ ಆಗಿ ವಾಸಿಸುತ್ತಿರಲಿಲ್ಲ ಅಂದರೆ ಸರಿ, ಹೋಗಿ ಬರುವುದು ಮಾಡುತ್ತಿದ್ದರು. ನನ್ನ ಅಜ್ಜ ಚೆನ್ನಬಸಪ್ಪ ನೀಲವುಂಜಿ ಗ್ರಾಮಕ್ಕೆ ಯಾವಾಗ ಹೋಗಿರುತ್ತಾರೆ ಅನ್ನುವುದು ನನಗೆ ನಿಖರವಾಗಿ ಗೊತ್ತಿಲ್ಲ. ಚೆನ್ನಬಸಪ್ಪನ ಮಕ್ಕಳು ಜೋಳದಕೂಡ್ಲಿಗಿಯಲ್ಲಿ ಜನಿಸಿರುತ್ತಾರೆ. ನನ್ನ ತಂದೆಯ ಜನ್ಮ ದಿನಾಂಕ ಗೊತ್ತಿಲ್ಲ, ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಚೆನ್ನಬಸಪ್ಪ ಸುಮಾರು 85 ವರ್ಷಗಳ ಹಿಂದೆ ಜೋಳದಕೂಡ್ಲಿಗಿಯನ್ನು ಬಿಟ್ಟು ನೀಲವುಂಜಿ ಗ್ರಾಮಕ್ಕೆ ಹೋಗಿ ವಾಸ ಮಾಡಲು ಪ್ರಾರಂಭಿಸಿದ್ದರು ಅಂದರೆ ಗೊತ್ತಿಲ್ಲ. ಚೆನ್ನಬಸಪ್ಪನವರು ಬೆಣ್ಣಿಹಳ್ಳಿ ಗ್ರಾಮದ ಚಂದ್ರಮ್ಮ ಅನ್ನುವವರನ್ನು ವಿವಾಹ ಆಗಿದ್ದರು ಎಂದರೆ ಸರಿ. ಚೆನ್ನಬಸಪ್ಪ ನೀಲವುಂಜಿ ಗ್ರಾಮಕ್ಕೆ ಹೋದ ನಂತರ ಅವರನ್ನು ಜೋಳದಕೂಡ್ಲಿಗಿ ಚೆನ್ನಬಸಪ್ಪ ಎಂದು ಕರೆಯುತ್ತಿದ್ದರು ಅಂದರೆ ಸರಿ. ನನ್ನ ತಂದೆ ಮತ್ತು 21 ನೇ ಪ್ರತಿವಾದಿಯನ್ನು ಸಹ ಜೋಳದಕೂಡ್ಲಿಗಿ ಮಹೇಶಪ್ಪ ಮತ್ತು ಜೋಳದಕೂಡ್ಲಿಗಿ ಸಿದ್ದಪ್ಪ ಎಂದು ಕರೆಯುತ್ತಾರೆ ಅಂದರೆ ನನ್ನ ತಂದೆಯನ್ನು ಜೋಳದಕೂಡ್ಲಿಗಿ ಮಹೇಶಪ್ಪ ಎಂದು ಕರೆಯುತ್ತಾರೆ. ನನ್ನ ತಂದೆ

ಪಿಡಬ್ಲ್ಯೂ-1
2. ಓ ಎಸ್ 42/2014

ಮತ್ತು 21 ನೇ ಪ್ರತಿವಾದಿಯವರ ಎಲ್ಲಾ ಗುರುತಿನ ಚೀಟಿಗಳಲ್ಲಿ ಮತ್ತು ಮತದಾರರ ಪಟಿಯಲ್ಲಿ ಜೋಳದಕೂಡ್ಲಿಗಿ ಮಹೇಶಪ್ಪ ಮತ್ತು ಜೋಳದಕೂಡ್ಲಿಗಿ ಸಿದ್ದಪ್ಪ ಎಂದು ಇದೆ ಎಂದರೆ 21 ನೇ ಪ್ರತಿವಾದಿ ಯಾರು ಅನ್ನುವುದು ಗೊತ್ತಿಲ್ಲ.

21 ನೇ ಪ್ರತಿವಾದಿ ನೀಲವುಂಜಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ನನ್ನ ತಂದೆ ಮತ್ತು 21 ನೇ ಪ್ರತಿವಾದಿಗೆ ಗಂಗಮ್ಮ ಅನ್ನುವ ಸಹೋದರಿ ಇದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆ ಒಬ್ಬನೇ ಮಗ. ಜೋಳದಕೂಡ್ಲಿಗಿ ಚೆನ್ನಬಸಪ್ಪನವರಿಗೆ ನನ್ನ ತಂದೆ, 21 ನೇ ಪ್ರತಿವಾದಿ ಮತ್ತು ಗಂಗಮ್ಮ ವಾರಸುದಾರರು ಅಂದರೆ ಸರಿಯಲ್ಲ, ನನ್ನ ತಂದೆ ಮಾತ್ರ ವಾರುಸುದಾರ ಈ ದಾವೆ ದಾಖಲಿಸುವ ಸಮಯದಲ್ಲಿ ನನ್ನ ತಂದೆಯು ಅವರ ಸಹೋದರ ಮತ್ತು ಸಹೋದರಿಯನ್ನು ಸೇರಿಸದೆ ದಾವೆ ಸಲ್ಲಿಸಿದ್ದರು ಅಂದರೆ ಅವರನ್ನು ಬಿಟ್ಟು ಉಳಿದವರ ಮೇಲೆ ದಾವೆ ದಾಖಲಿಸಿದ್ದರು. 21 ನೇ ಪ್ರತಿವಾದಿ ಮತ್ತು ಗಂಗಮ್ಮ ಚೆನ್ನಬಸಪ್ಪನ ಮಕ್ಕಳು ಆದರೂ ಸಹ ಅವರನ್ನು ಸೇರಿಸದೆ ಈ ದಾವೆ ದಾಖಲಿಸಲಾಗಿದೆ ಎಂದರೆ ಸುಳ್ಳು.

ಚೆನ್ನಬಸಪ್ಪ ನಿಲವುಂಜಿ ಗ್ರಾಮಕ್ಕೆ ಹೋದ ನಂತರ ಚೆಂಡ್ರೆಮ್ಮನ ತವರು ಮನೆಯವರು ಆಸ್ತಿ ಖರೀದಿಸಿ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಈ ಆಸ್ತಿಯ ಆದಾಯದಿಂದ ಇನ್ನೊಂದು ಆಸ್ತಿಯನ್ನು ಚಂಡ್ರೆಮ್ಮನ ಹೆಸರಿನಲ್ಲಿ ಖರೀದಿಸಿರುತ್ತಾರೆ ಅಂದರೆ ಸುಳ್ಳು. ಈ ಆಸ್ತಿಗಳನ್ನು ಚೆನ್ನಬಸಪ್ಪ ಮತ್ತು ಮಕ್ಕಳು ಒಟ್ಟಾಗಿ ಅನುಭವಿಸುತ್ತಿದ್ದರು ಅಂದರೆ ನನ್ನ ತಂದೆ ಮಾತ್ರ ಅನುಭವಿಸುತ್ತಿದ್ದರು. ಚೆನ್ನಬಸಪ್ಪ ಜೋಳದಕೂಡ್ಲಿಗಿಯನ್ನು ಬಿಟ್ಟು ನೀಲವುಂಜಿ ಗ್ರಾಮಕ್ಕೆ ಹೋದ ನಂತರ ಚೆನ್ನಬಸಪ್ಪ ಮತ್ತು ಅವರ ಮಕ್ಕಳನ್ನು ಜೋಳದಕೂಡ್ಲಿಗಿಯವರ ವಂಶಸ್ಥರು ಎಂದು ಕರೆಯುತ್ತಾರೆ ಎಂದರೆ ನನ್ನ ತಂದೆಯನ್ನು ಮಾತ್ರ ಆ ರೀತಿ ಕರೆಯುತ್ತಾರೆ . 2011 ರಲ್ಲಿ ನನ್ನ ತಂದೆಯು 21 ನೇ ಪ್ರತಿವಾದಿಯ ವಿರುದ್ಧ 12 ಎಕರೆ 8 ಸೆಂಟ್ಸ ಜಮೀನು ಮತ್ತು 1

ಮನೆಯ ಜಾಗದ ವಿಚಾರವಾಗಿ ಹರಪ್ಪನಹಳ್ಳಿ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದರು ಅಂದರೆ ಸರಿ. ಸದರಿ ದಾವೆಯಲ್ಲಿ 21 ನೇ ಪ್ರತಿವಾದಿಯು ಹಾಜರಾಗಿ ತಾನು ಮತ್ತು ನನ್ನ ತಂದೆ ಸಹೋದರರಾಗಿದ್ದು 1982 ರವರೆಗೆ ಒಟ್ಟಾಗಿ ವಾಸಿಸುತ್ತಿದ್ದ ವಿಚಾರವನ್ನು ಮತ್ತು ಆನಂತರ ಆಸ್ತಿಗಳ ವಿಭಾಗ ಮಾಡಿಕೊಂಡ ವಿಚಾರವನ್ನು ತಿಳಿಸಿದ್ದರು ಅಂದರೆ ಸುಳ್ಳು. ಸದರಿ ದಾವೆಯ ವಿಚಾರ ಈಗ ಮಾನ್ಯ ಉಚ್ಛನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಅಂದರೆ ಸರಿ. ಆ ಪ್ರಕರಣದಲ್ಲಿ ಗಂಗಮ್ಮಳು ಹಾಜರಾಗಿ ನನ್ನ ತಂದೆ ಮತ್ತು 21 ನೇ ಪ್ರತಿವಾದಿಯ ಸಹೋದರರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಅಂದರೆ ಗೊತ್ತಿಲ್ಲ.

2018 ರಲ್ಲಿ ಗಂಗಮ್ಮಳು ಹರಪ್ಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ತಂದೆ ಮತ್ತು 21 ನೇ ಪ್ರತಿವಾದಿಯ ವಿರುದ್ಧ ನೀಲವುಂಜಿ ಗ್ರಾಮದ ಆಸ್ತಿಗಳಲ್ಲಿ ನನಗೂ ಭಾಗ ಬರಬೇಕೆಂದು ದಾವೆ ದಾಖಲಿಸಿದ್ದಾರೆ ಅಂದರೆ ಸುಳ್ಳು. ಸದರಿ ದಾವೆಯ ಓ ಎಸ್ 55-2018 ಇನ್ನೂ ವಿಚಾರಣೆಗೆ ಬಾಕಿ ಇದೆ ಎಂದರೆ ಇರಬಹುದು. ಆ ಪ್ರಕರಣದಲ್ಲಿ ನನ್ನ ತಂದೆ ವೈಯುಕ್ತಿಕವಾಗಿ ಹಾಜರಾಗಿ ವಕೀಲರು ಮೂಲಕ ತಕರಾರು ಸಲ್ಲಿಸಿದ್ದಾರೆ ಅಂದರೆ ಸರಿ. ನನ್ನ ತಂದೆಯು ಈ ದಾವೆಯನ್ನು ತನ್ನ ಸಹೋದರ ಮತ್ತು ಸಹೋದರಿಯನ್ನು ಸೇರಿಸದೆ ದಾಖಲಿಸಿರುವುದರಿಂದ ಉರ್ಜಿತವಲ್ಲ ಅಂದರೆ ಸರಿಯಲ್ಲ. ಚೆನ್ನಬಸಪ್ಪ ಜೋಳದಕೂಡ್ಲಿಗಿಯಿಂದ ನೀಲವುಂಜಿಗೆ ಹೋದ ವಿಚಾರ ಮತ್ತು ವಿದ್ಯಾಮಾನಗಳ ಬಗ್ಗೆ ನನ್ನ ತಂದೆಗೆ ಚೆನ್ನಾಗಿ ತಿಳಿದಿದೆ ಅಂದರೆ ಸರಿ, ಆದರೆ ಅವರು ಈಗ ಬಂದು ಸಾಕ್ಷ್ಯ ನುಡಿಯಲು ಆಗುವುದಿಲ್ಲ. ನನ್ನ ತಂದೆಯು ಸಾಕ್ಷ್ಯ ನುಡಿಯಲು ಅಸಮರ್ಥರು ಎಂದು ತೋರಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ, ಹಾಜರು ಪಡಿಸಬಲ್ಲೆನು. ನನ್ನ ತಂದೆ ಹಾಜರಾಗಿ ಸಾಕ್ಷ್ಯ ನುಡಿದರೆ ಚೆನ್ನಬಸಪ್ಪನ ಕುಟುಂಬದ ವಿಚಾರಗಳು ಗೊತ್ತಾಗುತ್ತವೆ ಎಂದು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿಲ್ಲ ಅಂದರೆ ಸರಿಯಲ್ಲ.

ಸರ್ವೇ ನಂಬರ 416/ಸಿ, 420/ಬಿ ಮತ್ತು ಸರ್ವೇ ನಂಬರ 417/ಸಿ ಜಮೀನುಗಳು ಮತ್ತು 2 ಮನೆಗಳು ಇಂದಿಗೂ ಸಹ ನನ್ನ ಮುತ್ತಾತ ಸಿದ್ದಲಿಂಗಪ್ಪನವರ ಹೆಸರಿನಲ್ಲಿ ಇದ್ದರು ಸಹ ಆ ಆಸ್ತಿಗಳನ್ನು ಉದ್ದೇಶ ಪೂರ್ವಕವಾಗಿ ಸೇರಿಸಿಲ್ಲ, ಅವುಗಳನ್ನು ಸೇರಿಸಲಾಗಿದೆ. ಸದರಿ ಆಸ್ತಿಗಳು ಈ ದಾವೆಯಲ್ಲಿ ಎಷ್ಟನೇ ಐಟಂ ಆಸ್ತಿಗಳು ಎಂದು ಹೇಳಲಾಗುವುದಿಲ್ಲ. 21 ನೇ ಪ್ರತಿವಾದಿ ಮತ್ತು ಗಂಗಮ್ಮ ಸಹ ಚೆನ್ನಬಸಪ್ಪನ ಮಕ್ಕಳಾಗಿದ್ದರೂ ಸಹ ಅವರಿಗೆ ದಾವಾ ಆಸ್ತಿಗಳಲ್ಲಿ ಭಾಗ ನೀಡಬೇಕಾಗುತ್ತದೆ ಎಂದು ನನ್ನ ತಂದೆ ಮಾತ್ರ ಒಬ್ಬನೇ ಮಗ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 21 ನೇ ಪ್ರತಿವಾದಿ ಮತ್ತು ಗಂಗಮ್ಮ ಚೆನ್ನಬಸಪ್ಪನ ಮಕ್ಕಳು ಎಂದು ಸಾಕ್ಷ್ಯ ನುಡಿಯಲು ನನ್ನ ತಂದೆಯೇ ಸಕ್ಷಮ ವ್ಯಕ್ತಿ ಅಂದರೆ ಸರಿಯಲ್ಲ, ಅವರು ನನಗೆ ಅಧಿಕಾರ ಪಟ್ಟ ನೀಡಿದ್ದಾರೆ. ನೀಲವುಂಜಿ ಗ್ರಾಮದ ಚೆನ್ನಬಸಪ್ಪ ಮತ್ತು ಚೆಂದ್ರೆಮ್ಮನ ಹೆಸರಿನಲ್ಲಿರುವ ಮನೆಯನ್ನು ನನ್ನ ತಂದೆ ಮತ್ತು 21 ನೇ ಪ್ರತಿವಾದಿ ತಲಾ ಅರ್ಧ ಭಾಗಮಾಡಿಕೊಂಡು ವಾಸಿಸುತ್ತಿದ್ದಾರೆ ಎಂದರೆ ಸುಳ್ಳು. ಈ ರೀತಿ ತಲಾ ಅರ್ಧ ಭಾಗ ಮಾಡಿಕೊಂಡಿರುವ ಬಗ್ಗೆ ಆಸ್ತಿ ದಾಖಲೆಗಳಲ್ಲಿ ನಮೂದಿಸಿರುತ್ತದೆ ಅಂದರೆ ಅಕ್ರಮವಾಗಿ ಈ ರೀತಿ ಮಾಡಿಕೊಂಡಿರುತ್ತಾರೆ. ಈ ರೀತಿ ಅಕ್ರಮವಾಗಿ ದಾಖಲೆ ಮಾಡಿಕೊಂಡಿರುವುದನ್ನು ಪ್ರತ್ಯೇಕವಾಗಿ ಪ್ರಶ್ನೆ ಮಾಡಿರುವುದಿಲ್ಲ ನ್ಯಾಯಾಲಯದಲ್ಲಿ ತಿಳಿಸಿದ್ದೇನೆ. ಹರಪ್ಪನಹಳ್ಳಿ ನ್ಯಾಯಾಲಯದ ದಾವೆಯಲ್ಲಿ ತಿಳಿಸಿದ್ದೇನೆ. ಈ ದಾವೆಯಲ್ಲಿ ವಾದಿಯು ಭಾಗಕ್ಕೆ ಅರ್ಹನಾದರೆ 21 ನೇ ಪ್ರತಿವಾದಿ ಮತ್ತು ಗಂಗಮ್ಮ ಸಹ ಭಾಗಕ್ಕೆ ಅರ್ಹರು ಅಂದರೆ ಸುಳ್ಳು. 21 ನೇ ಪ್ರತಿವಾದಿ ಮತ್ತು ಗಂಗಮ್ಮಳಿಗೆ ಭಾಗ ನೀಡಬಾರದು ಎಂದು ನನ್ನ ತಂದೆ ನನ್ನ ಮೂಲಕ ಸುಳ್ಳು ಸಾಕ್ಷ್ಯ ಹೇಳಿಸುತ್ತಿದ್ದಾರೆ ಅಂದರೆ ಸರಿಯಲ್ಲ. ಚೆನ್ನಬಸಪ್ಪನ ನಿಜವಾದ ವಾರುಸದಾರರನ್ನು ದಾವೆಯಲ್ಲಿ ಮತ್ತು ವಂಶವೃಕ್ಷದಲ್ಲಿ ತೋರಿಸದೆ ದಾವೆ ಸಲ್ಲಿಸಿರುವುದರಿಂದ ದಾವೆಯು ಉರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
**ಕೂಡ್ಲಿಗಿ.**